(e) (i) Building facilities.
(ii) Electricity and water facilities.
(iii) Facilities such as communications, full fledged High School, Teachers' Training Institution.
(iv) Distance from the N. E. S. Block.
(v) Centrally located and connected with the surrounding villages.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಏಜ್ಲಾನ ಮಂದಿರದ ಸ್ಥಾಪನೆಗೆ ಇರಬೇಕಾದ ಅರ್ಹತೆಗಳೇ ನೆಂಬುದನ್ನು ತಾವು ಇಲ್ಲಿ ಹೇಳಿದ್ದೀರಿ. ಆದರೆ ರೋಣದಿಂದ ಕಳುಹಿಸಲಾಗಿದ್ದ ತಾಲ್ಲೂಕ್ ಬೋರ್ಡು ಮತ್ತು ತಾಲ್ಲೂಕ್ ಎಜುಕೇಷನ್ ಕಮಿಟಿಯವರು ಹೇಳಿದ್ದ ಅರ್ಹತೆಗಿಂತ ಈ ಕೊಣ ನೂರು ಗ್ರಾಮದಲ್ಲ ಏನು ಹೆಚ್ಚಿನ ಅರ್ಹತೆಗಳಿದ್ದುವು ?

†ಶ್ರೀ ಎಸ್. ಆರ್. ಕಂಠಿ.—ನಾವು ಈಗ ಇಲ್ಲಿ ಏನೇನು ಅನುಕೂಲತೆಗಳಿರಬೇಕು ಎಂದು ಹೇಳಿದ್ದೇವೊ ಆ ಅನುಕೂಲತೆಗಳೆಲ್ಲ ಅಲ್ಲವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಅದಕ್ಕಿಂತ ಹೆಚ್ಚೇನೂ ಅರ್ಹತೆಗಳಿರಲಿಲ್ಲವೋ ?

ಶ್ರೀ ಎಸ್. ಆರ್. ಕಂಠಿ.—ನಿಮ್ಮ ಕೋರಿಕೆಯನ್ನು ಮುಂದಿನ ಸಾಲಿನಲ್ಲಿ ಪರಿಶೀಲನೆ ಮಾಡ ಲಾಗುತ್ತದೆ.

SHORT NOTICE QUESTION AND ANSWER.

Death of a Lecturer of the Sahyadri College, Shimoga, on deputation for the N. C. C. Camp at Nagpur.

Q.—46. **Sri S. GOPALA GOWDA** (Thirthahalli).—

Will the Government be pleased to state :—

(*a*) whether i is a fact that one Shri Hanumanthappa Valada, a Lecturer of the Sahyadri College, Shimoga, who was deputed for N. C. C. Camp at Nagpur recently, was accidentally drowned there;
(*b*) the reason for his death;
(*c*) whether relief would be given to the family of the deceased ?

A.—**Sri S. R. KANTHI** (Minister for Education).—

(*a*) Yes. On 7th September 1963.
(*b*) Drowning.
(*c*) The matter is under consideration of Government.

ಶ್ರೀ ಎಸ್. ಗೋಪಾಲ ಗೌಡ.—ಆ ಶಿಬಿರಕ್ಕೆ ಈ ರಾಜ್ಯದಿಂದ ಎಷ್ಟು ಜನರನ್ನು ಕಳುಹಿಸ ಲಾಗಿತ್ತು ?

†ಶ್ರೀ ಎಸ್. ಆರ್. ಕಂಠಿ.—ಆ ವಿಚಾರ ಈಗ ನನ್ನಲ್ಲಿಲ್ಲ. ಇವರೊಬ್ಬರೇ ಎಂದು ಕಾಣುತ್ತದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಈ ನೊಂದ ಕುಟುಂಬದವರಿಗೆ ಪರಿಹಾರ ನೀಡಬೇಕೆಂಬ ಆಲೋಚನೆ ಸರ್ಕಾರದವರ ಪರಿಶೀಲನೆಯಲ್ಲಿದೆ ಎಂದು ತಿಳಿಸಲಾಗಿದೆ. ಇದನ್ನು ಆದಷ್ಟು ಬೇಗ ಅವರಿಗೆ ದೊರೆಯುವಂತೆ ಮಾಡಲಾಗುತ್ತದೆಂಬ ಭರವಸೆ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಆಗಲಿ.

ಶ್ರೀ ಎಸ್. ಗೋಪಾಲಗೌಡ.—ಈಗ ಹೀಗೆ ನೀರುವಾಲಾದವರು ಈಜುವುದಕ್ಕೆ ಹೋಗಿ ನೀರಿ ನಲ್ಲಿ ಮುಳುಗಿದರೇ, ಅಥವಾ ತರಬೇತಿ ಕೊಡುತ್ತಾದ್ದಾಗ ಹೀಗಾಯಿತೇ ?

ಶ್ರೀ ಎಸ್. ಆರ್. ಕಂಠಿ.—ತಾ. 7-9-1963ರಲ್ಲಿ ಹಳ್ಳವನ್ನು ದಾಟುವಾಗ ಅಕ್ಕಿಡೆಂಚಾಗಿ ನೀರಿನಲ್ಲಿ ಮುಳುಗಿದರು. ನೀರಿನಲ್ಲಿ ಕೊಚ್ಚಿಹೋದರೆಂದು ತಿಳಿದುಬಂದಿದೆ.

ಶ್ರೀ ಎಸ್. ಗೋಪಾಲ ಗೌಡ —ಆ ಶವವನ್ನು ಇಲ್ಲಿಗೆ ತಾಗಿಸಲು ಯಾರು ಪ್ರಯತ್ನಪಟ್ಟರು, ಅಧಿಕಾರಿಗಳೇ ಅದನ್ನು ಇಲ್ಲಿಗೆ ಕಳುಹಿಸುವ ವ್ಯವಸ್ಥೆ ಮಾಡಿದರೋ ?

ಶ್ರೀ ಎಸ್. ಆರ್. ಕಂಠಿ.—ಆ ವಿಚಾರವನ್ನು ನಾನು ಈಗ ಹೇಳಲಾರೆ.

ಶ್ರೀ ಜಿ. ಎ. ಗೌಡ.—ಅದು ಎಂಥ ಹಳ್ಳ ? ಆದರಲ್ಲಿ ನೀರು ಅಷ್ಟಿತ್ತೇ ?

ಶ್ರೀ ಎಸ್. ಆರ್. ಕಂಠಿ.—ಚಿಕ್ಕಹಳ್ಳ. ಆದರೂ ಹೆಚ್ಚು ಮಳೆ ಬಿದ್ದು ಪ್ರವಾಹ ಜಾಸ್ತಿ ಇತ್ತೆಂದು ಹೇಳಲಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೃತರಿಗೆ ಲಗ್ನವಾಗಿ ಇನ್ನೂ ಒಂದು ವರ್ಷ ಕೂಡ ಆಗಿರಲಿಲ್ಲ. ಆದುದರಿಂದ ಮೃತರ ಕುಟುಂಬದವರಿಗೆ ಸರ್ಕಾರದವರು ಕೊಡುವ ಪರಿಹಾರವನ್ನು ಬೇಗ ಕೊಡುವುದಕ್ಕೆ ಏರ್ಪಾಡುಮಾಡುತ್ತೀರಾ ?

Mr. SPEAKER.—The question itself says that it is "accidental".

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪರಿಹಾರವನ್ನು ಎಷ್ಟು ದಿನಗಳಲ್ಲಿ ಕೊಡಲಾಗುತ್ತದೆ ?

ಶ್ರೀ ಎಸ್. ಆರ್. ಕಂಠಿ.—ಜಾಗ್ರತೆಯಾಗೇ ಕೊಡುತ್ತೇವೆ.

ಶ್ರೀ ಎಸ್. ಗೋಪಾಲ ಗೌಡ.—ಈ ಪರಿಹಾರ ಕೊಡತಕ್ಕವರು ಕೇಂದ್ರ ಸರ್ಕಾರದವರೋ ಅಥವಾ ರಾಜ್ಯ ಸರ್ಕಾರದ ವಿದ್ಯಾ ಇಲಾಖೆಯವರೋ ?

ಶ್ರೀ ಎಸ್. ಆರ್. ಕಂಠಿ.—ಎನ್. ಸಿ. ಸಿ. ರೂಲ್ಸ್ ಪ್ರಕಾರ ಕೊಡಬೇಕಾಗಿದೆ. ಕೇಂದ್ರ ಸರ್ಕಾರದವರು ಕೊಡುವುದಿಲ್ಲ. ರಾಜ್ಯ ಸರ್ಕಾರದವರೇ ಕೊಡಬೇಕಾಗಿದೆ.

Mr. SPEAKER.—Question No. 982.

Sri M. N. NAGHNOOR.—This question may be put from the Chair because it is important.

Mr. SPEAKER.—Yes. It is put from the Chair.

STARRED QUESTIONS.

(to which oral answers were given.)

Levy of Surcharge on Land Revenue in the State.

*Q.—982. Sri C. M. REVANASIDDAIAH (Siruguppa).

Will the Government be pleased to state :—

(*a*) whether after the levy of surcharge on land revenue, the assessment on dry, wet and garden land has become uniform throughout the State;

(*b*) if not, whether they intend to secure such uniformity ?

A.—Sri M. V. KRISHNAPPA (Minister for Revenue).—

(*a*) No.

(*b*) Not by the levy of surcharge.

Mr. SPEAKER.—Yes, it is put from the chair.

Sri M. N. NAGHNOOR.—May I know whether it is the intention of the Government to bring about uniformity in the levy of water rate and irrigation cess in view of the surcharge levied recently.

ಶ್ರೀ ಎಂ. ವಿ. ಕೃಷ್ಣಪ್ಪ.—ಈ ವಾಟರ್ ರೇಟಿನ ಮೇಲೆ ಡ್ರೈ ಅಸೆಸ್‌ಮೆಂಟನ್ನು ಒಂದು ಯೂನಿಫಾರಂ ರೇಟಿಗೆ ತರಲು ಸಾಧ್ಯವಿಲ್ಲ. ಬೊಂಬಾಯಿ ಕರ್ನಾಟಕದಲ್ಲಿ ತರೀ ಕಂದಾಯ ಜಾಸ್ತಿ ಇದೆ. ಇದನ್ನು ಒಂದು ರೀಜನಬರ್ ರೇಟಿನಲ್ಲಿ ಇಡತಕ್ಕ ಬಗ್ಗೆ ಮೊನ್ನೆತಾನೆ ಕ್ಯಾಬಿನೆಟ್